ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಈ ರೀತಿ ಕ್ರಮ ಕೈಗೊಳ್ಳಲು ಎಷ್ಟು ದಿವಸ ಬೇಕಾಗುತ್ತದೆ. ಇದಕ್ಕೆ ಏನಾದರೂ ಒಂದು ಟೈಂ ಬೌಂಡ್ ಹಾಕಿಕೊಂಡಿದ್ದೀರಾ ?

ಶ್ರೀಮತಿ ಮನೋರಮಾ ಮಾಧ್ವರಾಜ್.—ಇಲಾಖೆಯ ವತಿಯಿಂದ ತನಿಖೆ ಆದಕೂಡಲೇ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ದೊಡ್ಡವಾಡ ಪಿ. ಎಚ್. ಸಿ, ಗೆ ವೈದ್ಯಾಧಿಕಾರಿ ನೇಮಕ

೪೬೨. ಶ್ರೀ ಶಿವಾನಂದ ಎಚ್.ಕೌಜಲಗಿ, (ಬೈಲಹೊಂಗಲ)—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಪಿ.ಹೆಚ್.ಸಿ. ಮೆಡಿಕಲ್ ಆಫೀಸರ್ ಇವರನ್ನು ಕಳೆದ ಒಂದೂವರೆ ವರ್ಷಗಳಿಂದ ಡೆಪ್ಯೂಟೇಶನ್‌ ಮೇಲೆ ಬೇರೆ ಕಡೆಗೆ ಡಿ.ಹೆಚ್.ಪಿ ಬೆಳಗಾಂ ಇವರು ಪೋಸ್ಟಿಂಗ್ ಮಾಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) ಆ ಪಿ ಹೆಚ್.ಸಿ. ಯಲ್ಲಿ ಮೆಡಿಕಲ್ ಆಫೀಸರ್ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಇ) ಆ ಪಿ. ಹೆಚ್.ಸಿ.ಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರ್‌ನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

(ಅ) ಬಂದಿದೆ.

(ಆ) ಬಂದಿದೆ.

(ಇ) ಸರ್ಕಾರದ ಅಧಿಸೂಚನೆ ದಿನಾಂಕ ೩೧-೫-೧೯೯೦ರ ಪ್ರಕಾರ ಈಗಾಗಲೇ ಒಬ್ಬ ವೈದ್ಯರನ್ನು ನೇಮಿಸಲಾಗಿದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಆ ಪಿ. ಹೆಚ್. ಸಿ. ಯಲ್ಲಿ ಎಷ್ಟು ಜನ ಮೆಡಿಕಲ್ ಆಫೀಸರ್ಸ್ ಇದ್ದಾರೆ? ಅವರನ್ನು ಯಾವ ತಾರೀಖಿನಿಂದ ಡೆಪ್ಯುಟೇಷನ್‌ನ ಮೇಲೆ ಎಲ್ಲಿಗೆ ಕಳುಹಿಸಿಕೊಡಲಾಗಿದೆ? ಎಂಬುದನ್ನು ತಿಳಿಸಬೇಕು? ಇನ್ನು ದೊಡ್ಡವಾಡ ಪಿ.ಹೆಚ್.ಸಿ.ಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರನ್ನು ತಾ. ೩೧-೫-೯೦ರಂದು ನೇಮಕ ಮಾಡಲಾಗಿದೆ ಎಂದು ಹೇಳಿದ್ದೀರಿ. ಇದಕ್ಕಾಗಿ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಇನ್ನೂ ಕೂಡ ಕೆಲಸದಮೇಲೆ ಹಾಜರಾಗಿಲ್ಲ. ಆದ್ದರಿಂದ ಕೂಡಲೇ ಅವರು ಅಲ್ಲಿ ಹೋಗಿ ಕೆಲಸಕ್ಕೆ ಸೇರಿಕೊಳ್ಳುವಂತೆ ತಿಳಿಸಬೇಕು. ಅವರನ್ನು ಬೇರೆಕಡೆ ಎಲ್ಲಿಗೂ ವರ್ಗಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್ ಹೆಚ್. ಕೌಜಲಗಿ —ಈ ಪಿ.ಹೆಚ್.ಸಿ. ಯಲ್ಲಿ ಎಷ್ಟುಜನ ಮೆಡಿಕಲ್ ಆಫೀಸರ್ಸ್ ಇದ್ದಾರೆ? ಅವರನ್ನು ಎಷ್ಟು ದಿವಸದಿಂದ ಡೆಪ್ಯುಟೇಷನ್ ಕಳುಹಿಸಿಕೊಟ್ಟಿದ್ದೀರಿ?

ಶ್ರೀಮತಿ ಮನೋರಮಾ ಮಾಧ್ವರಾಜ್.— ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ —ನಾನು ಕೇಳಿರುವಕ್ಕೆ ಪ್ರಶ್ನೆಗೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಬೆಳಗಾಂ ಡಿ.ಹೆಚ್.ಒ. ರವರು ಮೆಡಿಕಲ್ ಆಫೀಸರ್‌ನ್ನು ಪೋಸ್ಟಿಂಗ್ಸ್ ಮಾಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ನಾನು ಕೇಳಿರುವುದರಿಂದ ಈ ಪ್ರಶ್ನೆಗೆ ತಮ್ಮ ಉತ್ತರ ಬರಲೇಬೇಕಲ್ಲವೆ?

ಅಧ್ಯಕ್ಷರು.—ಬಂದಿದೆ ಎಂದು ಹೇಳಿದ್ದಾರಲ್ಲಾ,

ಶ್ರೀ ಎಸ್, ಹೆಚ್.ಕೌಜಲಗಿ.—ಈಗ ನೀವು ಪೋಸ್ಟಿಂಗ್ ಮಾಡಿರತಕ್ಕ ಮೆಡಿಕಲ್ ಆಫೀಸರನ್ನು ಬೇರೆಕಡೆಗೆ ಮತ್ತೆ ವರ್ಗಾವಣೆ ಮಾಡಿದರೆ ನಮ್ಮಲ್ಲಿರತಕ್ಕ ಜನರಿಗೆ ಬಹಳ ತೊಂದರೆಯಾಗುತ್ತದೆ, ಒಂದೆರಡು ತಿಂಗಳೆಕಾಲ ಕಳುಹಿಸಿಕೊಟ್ಟರೆ ನಮ್ಮದೇನೂ ತಕರಾರಿಲ್ಲ. ಆದರೆ ಹೆಚ್ಚುಕಾಲ ವರ್ಷಗಟ್ಟಲೆ ಕಳುಹಿಸಿಕೊಡಬಾರದು. ಏಕೆಂದರೆ ಒಬ್ಬ ಮೆಡಿಕಲ್ ಆಫೀಸರ್‌ನ್ನು ಬೆಳಗಾಂನಿಂದ ಬಾಗೇವಾಡಿಗೆ, ಬಾಗೇವಾಡಿಯಿಂದ ಬಾಗಲಕೋಟೆಗೆ ಅಂತ ಡೆಪ್ಯುಟೇಷನ್ ಕಳುಹಿಸುವುದಾದರೆ ಬಹಳ ತೊಂದರೆಯಾಗುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್ —ತಮ್ಮ ಕಳಕಳಿಯನ್ನು ಇಲ್ಲಿ ವ್ಯಕ್ತಪಡಿಸಿದ್ದೀರಿ. ಈ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಆರೋಗ್ಯ ಘಟಕ ಹಾಗೂ ಕೇಂದ್ರಗಳು

೩೨೫. ಶ್ರೀ ಶಂಕರಮೂರ್ತಿ ಮೋಟಮ್ಮ (ಮೂಡಿಗೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ಆರೋಗ್ಯ ಘಟಕಗಳ ಹಾಗೂ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

(ಆ) ಇವುಗಳ ಪೈಕಿ ಯಾವ ಯಾವ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಆರೋಗ್ಯ ಘಟಕಗಳಲ್ಲಿ ವೈದ್ಯಾಧಿಕಾರಿಗಳು ಇರುವುದಿಲ್ಲ ಹಾಗೂ ಯಾವಾಗ ಭರ್ತಿ ಮಾಡಲಾಗುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ೫ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ೧೦ ಪ್ರಾಥಮಿಕ ಆರೋಗ್ಯ ಘಟಕಗಳು ಇವೆ.

(ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳೆಹೊಳೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ, ಕಳಸ ಇಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯು ಖಾಲಿ ಇವೆ. ಆದಷ್ಟು ಬೇಗ ಭರ್ತಿ ಮಾಡಲಾಗುವುದು.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಪ್ಪು ಉತ್ತರವನ್ನು ಕೇವಲ ೨ ಆಸ್ಪತ್ರೆಗಳಲ್ಲಿ ಅಂದರೆ ಕಳಸ ಮತ್ತು ಬಾಳೆಹೊಳೆ ಕೇಂದ್ರಗಳಲ್ಲಿ ಮಾತ್ರ ಮಹಿಳಾ ವೈದ್ಯರು ಇಲ್ಲವೆಂದು ಹೇಳಿದ್ದಾರೆ ಈ ಊರುಗಳಿಗೆ ಕಳೆದ ೫-೬ ವರ್ಷಗಳಿಂದ ಯಾವ ಮಹಿಳಾ ವೈದ್ಯರನ್ನು ಪೋಸ್ಟ್ ಮಾಡಿದರೂ ಯಾರೂ ಕೂಡ ಬರುತ್ತಿಲ್ಲ. ಇದರ ಜೊತೆಗೆ ಮೂಡಿಗೆರೆ ಮತ್ತು ಹರೇಬೈಲ್ ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ಅವರ ಉತ್ತರದಲ್ಲಿ ಕೇವಲ ೨ ಆಸ್ಪತ್ರೆಗಳಲ್ಲಿ ಮಾತ್ರ ಮಹಿಳಾ ವೈದ್ಯರಿಲ್ಲವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ ಪೋಸ್ಟಿಂಗ್ಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ. ಆದಷ್ಟು ಶೀಘ್ರವಾಗಿ ಎಂದು ತಾವು ಹೇಳಬಹುದು. ಜನರಿಗೆ ಏನೂ ಗೊತ್ತಾಗುವುದಿಲ್ಲವೆಂದು ತಾವು ತಿಳಿದಿರಬಹುದು ಆದರೆ ಈಗ ಜನರು ಬಹಳ ಬುದ್ಧಿವಂತರಾಗಿದ್ದಾರೆ. ಅವರು ನಮ್ಮನ್ನು ಕೇಳುತ್ತಾರೆ, ಸರ್ಕಾರದವರು ವೈದ್ಯರನ್ನು ಇಲ್ಲಿಗೆ ನೇಮಕ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ, ಆದರೆ ಇದುವರೆಗೂ ಏತಕ್ಕೆ ಅವರು ಬರಲಿಲ್ಲ ಎಂದು ಕೇಳುತ್ತಾರೆ. ಆದ್ದರಿಂದ ಆದಷ್ಟು ಬೇಗ, ಆದಷ್ಟು ಶೀಘ್ರ ಎಂಬ ಮಾತನ್ನು ಬಿಟ್ಟು ಈ ಪಿ.ಹೆಚ್.ಯು ಮತ್ತು ಪಿ ಹೆಚ್.ಸಿ. ಗಳಿಗೆ ಎಷ್ಟು ದಿವಸದಲ್ಲಿ ಮಹಿಳಾ ವೈದ್ಯರನ್ನು ಪೋಸ್ಟಿಂಗ್ಸ್ ಮಾಡುತ್ತೀರೆಂಬುದನ್ನು ಖಚಿತವಾಗಿ ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್ —ಮಾನ್ಯ ಅಧ್ಯಕ್ಷರೇ ಈಗ ಹೇಳಬೇಕಾದರೆ ಮಹಿಳಾ ವೈದ್ಯಾಧಿಕಾರಿಗಳ ೫೫ ಹುದ್ದೆಗಳು ಖಾಲಿ ಇವೆ ಅವನ್ನೆಲ್ಲಾ ಭರ್ತಿ ಮಾಡಬೇಕಾದರೆ ಮಾನ್ಯ ಆರ್ಥ ಸಚಿವರು ನಾವು ಎಲ್ಲ ಕಡೆಯೂ ವಿಚಾರ ವಿನಿಮಯ ಮಾಡಿದಾಗ, ಎಕಾನಮಿ ಇದ್ದ ಬ್ಯಾನನ್ನು ಹಿಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಪಿ ಎಸ್. ಕಮಿಷನ್ ಅವರು ನಮಗೆ ಒಂದು ಲಿಸ್ಟನ್ನು ಕಳುಹಿಸಿಕೊಡಬೇಕಾಗುತ್ತದೆ. ಅವರು ಲಿಸ್ಟನ್ನು ಕಳುಹಿಸಿಕೊಟ್ಟ ಮೇಲೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ವೈದ್ಯಾಧಿಕಾರಿಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ.

ಮಂಗನ ಕಾಯಿಲೆಯಿಂದಾದ ಸಾವುಗಳು

೬೧೨. ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೯೫-೯೬ನೇ ಸಾಲಿನಲ್ಲಿ ಮಂಗನ ಕಾಯಿಲೆಯಿಂದ ಎಷ್ಟು ಜನರು ಮೃತರಾಗಿದ್ದಾರೆ ?